## ಎಂಪಿಎಂ ಕಾಲೇಜು: ಆಂಗ್ಲಭಾಷಾ ಪ್ರಯೋಗಾಲಯ ಉದ್ಘಾಟನೆ

# ‘ವಿದ್ಯಾರ್ಥಿಗಳು ಸಂವಹನ ಭಾಷೆ ಕಲಿತು ಯಶಸ್ವಿಯಾಗಿ’

ಕಾರ್ಕಳ, ಸೆ. 5: ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ ಯೋಜನೆಯಡಿ ಮಂಜೂರಾದ ಅನುದಾನದಲ್ಲಿ ಸುಮಾರು 10 ಲ.ರೂ. ವೆಚ್ಚದಲ್ಲಿ ನಿರ್ಮಾಗೊಂಡ ಆಂಗ್ಲಭಾಷಾ ಪ್ರಯೋಗಾಲಯವನ್ನು ಸೆ. 4ರಂದು ಕೋಟೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ। ರಾಜೇಂದ್ರ ನಾಯಕ್ ಲೋಕಾರ್ಪಣೆಗೊಳಿಸಿದರು.




ಭಾಷೆಯ ಅಂತರಾಳವನ್ನು ಅರಿಯಬೇಕು. ಇಂದಿನ ದಿನಗಳಲ್ಲಿ ಆಂಗ್ಲ ಭಾಷೆಯನ್ನು ಕಲಿಯುವ ಅನಿವಾರ್ಯತೆಯಿದ್ದು ವಿದ್ಯಾರ್ಥಿಗಳು ಸಂವಹನ ಭಾಷೆಯಾಗಿ ಕಲಿತು ಯಶಸ್ವಿಯಾಗಬೇಕೆಂದರು.

ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥ ಯೋಗೀಶ್ ಡಿ.ಎಚ್. ಮಾತನಾಡಿ, ಪ್ರಾಯೋಗಿಕ ಕಲಿಕೆ ಮೂಲಕ ವಿದ್ಯಾರ್ಥಿಗಳಿಗೆ ಲ್ಯಾಬ್‌ನಲ್ಲಿ ಇಂಗ್ಲಿಷ್ ಕಲಿಸಲಾಗುತ್ತದೆ. ಕೇಳುವುದು, ಮಾತನಾಡುವುದು, ಓದುವುದು ಹಾಗೂ ಬರೆಯುವುದು ಈ ನಾಲ್ಕು ವಿಧಾನಗಳ ಮೂಲಕ ಹೊಸ ಭಾಷೆಯನ್ನು ಕಲಿಯಲು ಸಾಧ್ಯವೆಂದರು.

ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಅಧ್ಯಕ್ಷತೆ ವಹಿಸಿ ಮಾತನಾಡಿ ನಾವು ಪ್ರಪಂಚದೊಂದಿಗೆ ವ್ಯವಹರಿಸಲು ಸಾಧ್ಯವಾಗಿರುವುದು ಇಂಗ್ಲಿಷ್‌ನಿಂದಾಗಿ. ಇಂಗ್ಲಿಷ್ ಕಲಿತರೆ ಉದ್ಯೋಗಾವಕಾಶಗಳು ಅಧಿಕವಾಗಿದೆ. ಆದರೆ• ಇಂಗ್ಲಿಷ್ ಬಾರದವರು ಕೀಳರಿಮೆ ಬೆಳೆಸಿಕೊಳ್ಳುವ ಅಗತ್ಯವಿಲ್ಲ. ಪ್ರಯೋಗಾಲಯದಲ್ಲಿ 20 ಕಂಪ್ಯೂಟರ್‌ಗಳಿದ್ದು ಎಲ್ಲಕಂಪ್ಯೂಟರಿಗೂ ಆಂಗ್ಲ ಭಾಷಾ ಕಲಿಕಾ ಸಾಫ್ಟ್‌ವೇರ್‌ನ್ನು ಅಳವಡಿಸಲಾಗಿದೆ ಎಂದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಜ್ಯೋತಿ ಎಲ್. ಜನ್ನೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶರಣ್ಯಾ ಪ್ರಾರ್ಥಿಸಿ, ಪ್ರಾಧ್ಯಾಪಕಿ ಸಂಧ್ಯಾ ಭಂಡಾರಿ ಸ್ವಾಗತಿಸಿದರು. ಪ್ರಾಧ್ಯಾಪಕಿ ದಿವ್ಯಾ ಪ್ರಭು ನಿರೂಪಿಸಿ, ವಂದಿಸಿದರು.